**ಓ.ಎಸ್. ನಂ. 8/2018** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 13.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ.ಎಸ್.ಎಸ್ ವಕೀಲರಿಂದಃ**

ನಾನು 10ನೇ ತರಗತಿ ಓದಿರುತ್ತೇನೆ. ಎಲ್ಲ ಪ್ರತಿವಾದಿಗಳ ಪರವಾಗಿ ನಾನು ಸಾಕ್ಷಿ ನುಡಿಯುತ್ತಿದ್ದೇನೆ. 4 ನೇ ಪ್ರತಿವಾದಿಯು ಈಗ ಬೆಂಗಳೂರಿನಲ್ಲಿರುತ್ತಾರೆ. ಅವರು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ಮನೆಗೆ ನೋಟಿಸ್ ಬಂದಿರುವುದಿಲ್ಲ ಎನ್ನುವರು. ಈ ದಾವೆ ದಾಖಲಿಸಿದಾಗ 4 ನೇ ಪ್ರತಿವಾದಿಯು ಮೈಸೂರಿನಲ್ಲಿ ಓದುತ್ತಿದ್ದರು. 4 ನೇ ಪ್ರತಿವಾದಿಯು ಪ್ರಾಪ್ತ ವಯಸ್ಕನಾದಾಗ ಮೈಸೂರಿನ ಹಾಸ್ಟೆಲಿನಲ್ಲಿ ಓದುತ್ತಿದ್ದರು. 4 ನೇ ಪ್ರತಿವಾದಿಗೆ ನ್ಯಾಯಾಲಯಕ್ಕೆ ಹಾಜರಾಗುವಂತೆ ಪತ್ರಿಕೆಯಲ್ಲಿ ನೋಟಿಸನ್ನು ನೀಡಲಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಿಚಾರ ಗೊತ್ತಿರುತ್ತದೆ. ನನ್ನ ಪ್ರಮಾಣಪತ್ರದಲ್ಲಿ ಉಳಿದ ಪ್ರತಿವಾದಿಯರ ಪರವಾಗಿ ಸಹ ಸಾಕ್ಷಿ ನುಡಿಯುತ್ತೇನೆ ಎಂದು ಬರೆಸಿರುವುದಿಲ್ಲ. ವಾದಿಯು ನನ್ನ ಹಾಗೂ ಇತರ ಪ್ರತಿವಾದಿಯರ ವಿರುದ್ಧ ದಾವೆ ಹಾಕಿರುವ ವಿಚಾರ ಗೊತ್ತಿತ್ತು ಎಂದರೆ ಸಾಕ್ಷಿದಾರರು ನನ್ನ ವಿರುದ್ಧ ಮಾತ್ರ ದಾವೆ ಹಾಕಿರುವ ವಿಚಾರ ಗೊತ್ತಿತ್ತು ಎನ್ನುವರು. ನಾನು ನ್ಯಾಯಾಲಯದಿಂದ ಸಮನ್ಸ ಪಡೆದಾಗ ಅದರ ಜೊತೆ ಲಗತ್ತಾಗಿರುವ ದಾವಪತ್ರದಲ್ಲಿ ಉಳಿದ ಪ್ರತಿವಾದಿಯರ ಹೆಸರು ನಮೂದಾಗಿರುವುದನ್ನು ನಾನು ನೋಡಿರುವುದಿಲ್ಲ. ನಾನು ಅಪಾಪ್ತರಾದ 3 ಮತ್ತು 4 ನೇ ಪ್ರತಿವಾದಿಯರ ಪರವಾಗಿ ಸಹ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬ ಹೆಣ್ಣುಮಗಳು ಇರುತ್ತಾರೆ. ನಾವು 2008ರಲ್ಲಿ ವಿಭಾಗವಾಗಿರುತ್ತೇವೆ. ಸರ್ವೆ ನಂ.65/2 ಪಿ1, 83/2, 51/1, 51/2 ರಲ್ಲಿ ನನಗೆ ಆಸ್ತಿ ಬಂದಿರುತ್ತದೆ ಎಂದರೆ ಸಾಕ್ಷಿದಾರರು ಪಿತ್ರಾರ್ಜಿತ ಆಸ್ತಿಯಾಗಿದ್ದು ಪಾಲಿನಲ್ಲಿ ಬಂದಿರುತ್ತದೆ ಎನ್ನುವರು. ದಾವಆಸ್ತಿಗಳು ವಿಭಾಗದಲ್ಲಿ ನನ್ನ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ನನ್ನ ಪಾಲಿಗೆ ಬಂದ ನಂತರ ಸದರಿ ಆಸ್ತಿಯ ಮಾಲೀಕ ನಾನೇ ಆಗಿರುತ್ತೇನೆ ಎಂದರೆ ಸಾಕ್ಷಿದಾರರು ಮಕ್ಕಳು ಸೇರಿ ಎಲ್ಲರ ಪಾಲಿಗೆ ಬಂದಿರುತ್ತದೆ ಎನ್ನುವರು. 2011-12ರಲ್ಲಿ ಅಂತರಸಂತೆಯ ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತೇನೆ ಎಂದರೆ ಸಾಕ್ಷಿದಾರರು ವ್ಯವಸಾಯದ ಉದ್ದೇಶಕ್ಕೆ ಪಡೆದಿರುತ್ತೇನೆ ಎನ್ನುವರು. ಲಿಖಿತ ಹೇಳಿಕೆ ಸಲ್ಲಿಸಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. ನನ್ನ ವಿರುದ್ಧ ಮೈಸೂರಿನ ನ್ಯಾಯಾಲಯದಲ್ಲಿ ಚೆಕ್ ಅಮಾನ್ಯ ಪ್ರಕರಣವನ್ನು ಸತೀಶ್ ಎಂಬುವವರು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದು ನನ್ನ ವೈಯಕ್ತಿಕ ವ್ಯವಹಾರ ಎನ್ನುವರು. ಸದರಿ ಪ್ರಕರಣದಲ್ಲಿ ನನಗೆ ಶಿಕ್ಷೆಯಾಗಿ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ ಎನ್ನುವರು. ಅದೇ ರೀತಿ ಮೈಸೂರಿನ ಸಿವಿಲ್

ನ್ಯಾಯಾಲಯದಲ್ಲಿ ಚೆಕ್ ಅಮಾನ್ಯ ಪ್ರಕರಣವನ್ನು ಸುನೀಲ್ ಶೆಟ್ಟಿ ಎಂಬುವವರು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದನ್ನು ರಾಜಿ ಮಾಡಿಕೊಂಡಿರುತ್ತೇವೆ ಎನ್ನುವರು. ಅದೇ ರೀತಿ ಪಾಂಡವಪುರ ನ್ಯಾಯಾಲಯದಲ್ಲಿ ಚೆಕ್ ಅಮಾನ್ಯ ಪ್ರಕರಣವನ್ನು ಎ.ಕೆ.ಗೀತಾ ಎಂಬುವವರು ದಾಖಲಿಸಿದ್ದರು ಎಂದರೆ ಸರಿ. ಸಾಕ್ಷಿದಾರರು ಮುಂದುವರಿದು ಅದನ್ನು ರಾಜಿ ಮಾಡಿಕೊಂಡಿರುತ್ತೇವೆ ಎನ್ನುವರು.

ದಿನಾಂಕ 6.8.2014 ರಂದು ನಾನು ವಾದಿಯ ಜೊತೆ ದಾವಆಸ್ತಿಗಳಿಗೆ ಸಂಬಂಧಿಸಿದಂತೆ ಕ್ರಯದ ಕರಾರನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಗಳನ್ನು 10 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ ಅದೇ ದಿನ 9 ಲಕ್ಷವನ್ನು ಮುಂಗಡವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು 2014 ರಲ್ಲಿ ಪ್ರತಿ ಎಕರೆಗೆ 10 ಲಕ್ಷ ಮೌಲ್ಯವಿತ್ತು ಎನ್ನುವರು. ಅದನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಸಮಯದಲ್ಲಿ ಅಷ್ಟು ಮೌಲ್ಯ ಇರಲಿಲ್ಲ, ಅಂದಿನ ಆಸ್ತಿ ಮೌಲ್ಯಕ್ಕೆ ನಾನು ಕರಾರು ಪತ್ರ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ನಿಪಿ1 ರ ಎಲ್ಲ ಪುಟದಲ್ಲಿರುವ ನಿಪಿ1 ಎ ಎಂದು ಗುರುತಿಸಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿದಾರರು ಮುಂದುವರಿದು ಖಾಲಿ ಹಾಳೆಗೆ ಸಹಿ ಪಡೆದುಕೊಂಡಿದ್ದು 2011 ರಿಂದ ವಾದಿಯ ಬಳಿ ನಾನು ಹಣದ ವ್ಯವಹಾರ ಮಾಡುತ್ತಿದ್ದೆ ಎನ್ನುವರು. 2011 ರಿಂದ ವಾದಿಯ ಬಳಿ ಹಣಕಾಸು ವ್ಯವಹಾರ ಮಾಡಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ವಿಶ್ವಾಸದಲ್ಲಿ ಹಣ ತೆಗೆದುಕೊಂಡು ವಾಪಸ್ ನೀಡುತ್ತಿದ್ದೆ ಎನ್ನುವರು. ನನಗೆ ವ್ಯವಹಾರ ಜ್ಞಾನ ಇರುತ್ತದೆ ಎಂದರೆ ಸರಿ. ವ್ಯವಹಾರ ಜ್ಞಾನ ಇರುವುದರಿಂದ ಖಾಲಿ ಪತ್ರಕ್ಕೆ ಸಹಿ ಮಾಡುವುದಿಲ್ಲ ಎಂದರೆ ಸಾಕ್ಷಿದಾರರು ವಾದಿಯು ಬಡ್ಡಿ ವ್ಯವಹಾರ ಮಾಡುತ್ತಿದ್ದು ವಿಶ್ವಾಸದಲ್ಲಿದ್ದರಿಂದ ಖಾಲಿ ಪತ್ರಕ್ಕೆ ಸಹಿ ಮಾಡಿರುತ್ತೇನೆ ಎನ್ನುವರು. ಬಡ್ಡಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ1 ರ ಪ್ರತಿ ಪುಟದಲ್ಲಿ ನಾನು ಎರಡೆರಡು ಸಹಿ ಮಾಡಿದ್ದು ನನ್ನ ಅಪ್ರಾಪ್ತ ಮಕ್ಕಳ ಪರವಾಗಿ ಸಹ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ಮಕ್ಕಳ ಪರವಾಗಿ ಸಹಿ ಮಾಡಿರುವುದಿಲ್ಲ, ಎರಡೆರಡು ಸಹಿ ಮಾಡಲು ಹೇಳಿದ್ದರಿಂದ ಮಾಡಿರುತ್ತೇನೆ ಎನ್ನುವರು. ನಿಪಿ1 ರಲ್ಲಿರುವ ಕಲ್ಪನ ಎಂಬ ಸಹಿ ನನ್ನ ಹೆಂಡತಿಯ ಸಹಿಯಾಗಿರುವುದಿಲ್ಲ. ನಿಪಿ1 ರಲ್ಲಿರುವ ಕಲ್ಪನ ಎಂಬ ಸಹಿ ನನ್ನ ಹೆಂಡತಿಯ ಸಹಿಯಾಗಿದ್ದು, ನಾನು ಮತ್ತು ನನ್ನ ಹೆಂಡತಿ ಸೇರಿ ನಿಪಿ1 ಕರಾರುಪತ್ರವನ್ನು ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾನು, ನನ್ನ ಹೆಂಡತಿ ಮತ್ತು ಮಕ್ಕಳು ಒಟ್ಟಿಗೆ ವಾಸವಾಗಿರುತ್ತೇವೆ ಎಂದರೆ ಸಾಕ್ಷಿದಾರರು ಮಕ್ಕಳು ಬೇರೆ ಕಡೆ ವಾಸವಾಗಿದ್ದು ನನ್ನ ಹೆಂಡತಿ ನನ್ನ ಜೊತೆ ಇರುತ್ತಾರೆ ಎನ್ನುವರು. 2018 ರಲ್ಲಿ 3 ಮತ್ತು 4 ನೇ ಪ್ರತಿವಾದಿಯರು ಅಪ್ರಾಪ್ತ ವಯಸ್ಕರಾಗಿದ್ದರು

ಎಂದರೆ ಸಾಕ್ಷಿದಾರರು ಪ್ರಾಪ್ತ ವಯಸ್ಕರಾಗಿದ್ದರು ಎನ್ನುವರು. ನ್ಯಾಯಾಲಯದಿಂದ ನನ್ನ ಹೆಂಡತಿ ಸಮನ್ಸ ಬಂದಿರುತ್ತದೆ ಎಂದರೆ ಅದು ನನ್ನ ಗಮನಕ್ಕೆ ಬಂದಿರುವುದಿಲ್ಲ ಎನ್ನುವರು. ಸಮನ್ಸ ಬಂದಿರುವ ವಿಚಾರ ನನ್ನ ಗಮನಕ್ಕೆ ಬಂದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 6.8.2014 ರ ಕರಾರಿನ ಪ್ರಕಾರ ದಿನಾಂಕ 25.2.2014 ರ ಒಳಗೆ ಬಾಕಿ ಹಣವನ್ನು ಪಡೆದುಕೊಂಡು ಕ್ರಯಪತ್ರ ಬರೆದುಕೊಡಲು ಒಪ್ಪಿಕೊಂಡಿದ್ದೆನು ಎಂದರೆ ಸಾಕ್ಷಿದಾರರು ಆಸ್ತಿ ಮಾರಾಟ ಮಾಡುವ ಅವಶ್ಯಕತೆ ಇರಲಿಲ್ಲ, ವ್ಯವಸಾಯದ ಉದ್ದೇಶಕ್ಕೆ ವಾದಿಯಿಂದ ಸಾಲ ಪಡೆದುಕೊಂಡಿದ್ದೆನು ಎನ್ನುವರು. ಕರಾರಿನ ಪ್ರಕಾರ ಕ್ರಯಪತ್ರ ಬರೆದುಕೊಡುವಂತೆ ವಾದಿಯು ಹಲವಾರು ಬಾರಿ ನನ್ನ ಬಳಿ ಕೇಳಿರುತ್ತಾರೆ ಎಂದರೆ ಸಾಕ್ಷಿದಾರರು ನಾನು ಬಡ್ಡಿ ಪಾವತಿಸುತ್ತಿದ್ದರಿಂದ ವಾದಿಯು ಕೇಳಿರುವುದಿಲ್ಲ ಎನ್ನುವರು. ನಾನು ಕ್ರಯಪತ್ರ ಬರೆದುಕೊಡದಿದ್ದರಿಂದ ವಾದಿಯು 19.12.2015 ರಂದು ನೋಟಿಸ್ ನೀಡಿದ್ದರು ಎಂದರೆ ಸಾಕ್ಷಿದಾರರು ನನಗೊಬ್ಬನಿಗೆ ನೋಟಿಸ್ ನೀಡಿದ್ದರು ಎನ್ನುವರು. ಸದರಿ ನೋಟಿಸಿಗೆ ನಾನು ಉತ್ತರ ನೀಡಿರುವುದಿಲ್ಲ, ನೇರವಾಗಿ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎನ್ನುವರು. ನನ್ನ ಹೆಂಡತಿಗೆ ಬಂದಿರುವ ನೋಟಿಸನ್ನು ನಾನು ತಿರಸ್ಕರಿಸಿರುತ್ತೇನೆ ಎಂದರೆ ಸಾಕ್ಷಿದಾರರು ನನ್ನ ಹೆಂಡತಿಗೆ ನೋಟಿಸ್ ಬಂದಿರುವ ವಿಚಾರ ನನ್ನ ಗಮನದಲ್ಲಿರುವುದಿಲ್ಲ ಎನ್ನುವರು. ಯಾವುದೇ ನೋಟಿಸ್ ಸ್ವೀಕರಿಸಿದರೆ ಅದಕ್ಕೆ ಉತ್ತರ ನೀಡಬೇಕೆಂಬ ವಿಚಾರ ಗೊತ್ತಿರುತ್ತದೆ ಎಂದರೆ ಸಾಕ್ಷಿದಾರರು ವಕೀಲರ ಮೂಲಕ ಉತ್ತರ ನೀಡಬೇಕೆಂದು ನೋಟಿಸನ್ನು ಪಡೆದುಕೊಂಡಿರುತ್ತೇನೆ ಎನ್ನುವರು. ವಕೀಲರ ಮೂಲಕ ಬಂದಿರುವ ನೋಟಿಸಿಗೆ ನೀವು ಉತ್ತರ ನೀಡಿರುವುದಿಲ್ಲ ಎಂದರೆ ಸಾಕ್ಷಿದಾರರು ನೇರವಾಗಿ ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ ಎನ್ನುವರು. ಪ್ರತಿವಾದಿಯರು ಕ್ರಯಪತ್ರ ಬರೆದುಕೊಡದಿದ್ದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಾದಿಗೆ ದಾವಆಸ್ತಿಗಳನ್ನು 10 ಲಕ್ಷಕ್ಕೆ ಮಾರಾಟ ಮಾಡಲು ಒಪ್ಪಿ 9 ಲಕ್ಷ ಹಣವನ್ನು ಮುಂಗಡವಾಗಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.